**ಹೊಸನಗರದ ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ಗಳವರ ನ್ಯಾಯಾಲಯದಲ್ಲಿ**

**ಸಿಸಿ. ನಂ 707/2020**

| | | | |
|---|---|---|---|
| ಸಾಕ್ಷಿಯ ಹೆಸರು | ಕಾಡಪ್ಪ | ಚಾ.ಸಾ | **1** |
| ತಂದೆ ಹೆಸರು | ಮಾಳ ದಾಸಯ್ಯ | ಪ್ರಾ.ಸಾ | **1** |
| ವಯಸ್ಸು | **70** ವರ್ಷ | **ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ** 08.09.2023 | |
| ಉದ್ಯೋಗ | ಕೃಷಿಕ | | |
| ವಾಸಸ್ಥಳ | ಮಸಗಲ್ಲಿ ಗ್ರಾಮ ಹೊಸನಗರ ತಾ | | |

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ-**

ಚಾಸಾ **4** ನನ್ನ ಮಗ.ಚಾಸಾ **5** ನನ್ನ ಸೊಸೆ, ದಿನಾಂಕ **25-7-2020** ರಂದು ಸಂಜೆ **6** ಗಂಟೆ ಸಮಯದಲ್ಲಿ ಮಸ್ಗಲ್ಲಿ ಗ್ರಾಮದಲ್ಲಿ ಇದ್ದಾಗ ಆರೋಪಿ **1** ರಿಂದ **3** ವರು ಅಲಿಗೆ ಬಂದರು. ನನ್ನ ಮನೆ ಮಾಳಿಗೆಯನ್ನು ದೂಡಿರುತ್ತಾರೆ.ನಾನು ಅದನ್ನು ಪ್ರಶ್ನಿಸಿದಾಗ ನನಗೆ ಬಾಯಿಗೆ ಬಂದ ಹಾಗೇ ಆರೋಪಿ **1** ರಿಂದ **3** ರಮರ ಅವಾಚ್ಯ ಶಬ್ದಗಳಿಂದ ಸೂಳೆ ಮಗನೆ ಹಾಗೇ ಹೀಗೆ ಎಂದು ಬೈದಿರುತ್ತಾರೆ, ನಾನು ಯಾಕೆ ಬೈಯುತ್ತೀರಾ ಎಂದು ಕೇಳಿದಾಗ **1** ನೇ ಆರೋಪಿ ಉಮೇಶ ಕೋಲಿನಿಂದ ತಲೆಗೆ ಹೊಡೆದಿರುತ್ತಾರೆ. ನಂತರ **3** ನೇ ಆರೋಪಿಯು ಕೋಲಿನಿಂದ ಎಡ ಗೈ ಮೇಲೆ ಹೊಡೆದಿರುತ್ತಾರೆ. ಆಗ ಆರೋಪಿ **4, 5** ರವರು ಅಲ್ಲಿಗೆ ಬಂದು ನನ್ನನ್ನು ದೂಡಾಡಿ ಕಾಲುಗಳಿಂದ ತುಳಿದಿರುತ್ತಾರೆ. ಆರೋಪಿ **2** ಸಹ ನನ್ನನ್ನು ದೂಡಾಡಿ ಕಾಲಿನಿಂದ ಒದ್ದಿರುತ್ತಾರೆ. ಎಲ್ಲ ಅರೋಪಿತರು ಸೇರಿ ನಿನ್ನನ್ನು ಜಪೀವ ಸಹಿತ ಉಳಿಸುವುದಿಲ್ಲ ಎದು ಜೀವದ ಬೆದರಿಕೆ ಹಾಕಿರುತ್ತಾರೆ. ನಾನು ಕೂಗಿಕೊಂಡಾಗ ನನ್ನ ಮಗ ಚಾಸಾ **4,** ನನ್ನಸೊಸೆ ಚಾಸ **5** ರದು ಜಗಳ ಬಿಡಿಸಿರುತ್ತಾರೆ.

ನಂತರ ನನ್ನನ್ನು ಹೊಸನಗರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಾನು ಹೇಳಿದಂತೆ ಚಾಸಾ 4 ರವರ ದೂರನ್ನು ಬೆರದುಕೊಟ್ಟಿರುತ್ತಾರೆ. ಸಾಕ್ಷಿಯು ಹೇಳಿಕೆಯ ದೂರು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು, ಸಹಿಯನ್ನು ನಿಪಿ1 ಎ ಎಂದುದ ಗುರುತಿಸಲಾಯಿತು.

ನಂತರ ಪೊಲೀಸರು ಬಂದು ನಮ್ಮನ್ನು ವಿಚಾರಣೆ ಮಾಡಿರುತ್ತಾರೆ. ನಾನು ಮುಂದುವರಿದ ಹೇಳಿಕೆ ನೀಡಿರುತ್ತೇನೆ. ಆ ದಿನ ನನಗೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ ನ್ಯಾಯಾಲಯದ 1 ರಿಂದ 3 ಆರೋಪಿಗಳು ಮತ್ತು 5 ರವರನ್ನು ನೋಡಿ ಗುರುತಿಸಿರುತ್ತಾರೆ. 4 ನೇ ಆರೋಪಿ ಗೈರು ಹಾಜರು ಇದುದ

ಅವರನ್ನು ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ.

ಆ ದಿನ ಆರೋಪಿ **1** ಮತ್ತು **3** ರವರು ನನಗೆ ಹೊಡೆಯಲುಉಪಯೊಗಿಸಿದ ದೊಣ್ಣೆ ನೊಡಿದರೆ ಗುರುತಿಸುತ್ತೇನೆ ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಎರಡು ದೊಣ್ಣೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಎಂಒ-**1** ಮತ್ತು ಎಂಒ-**2** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ.ವೈ.ಪಿ. ಎ ವಕೀಲರಿಂದಃ**

ಪಾಟೀ ಸವಾಲು ಮಾಡಲು ಆರೋಪಿತರ ಪರ ವಕೀಲರು ಸಮಾಯಾವಕಾಶ ಕೋರಿದ್ದು **500-00** ಖರ್ಚು ಸಹಿತ ಪಾಟೀ ಸವಾಲಿಗೆ ಸಮಾಯಾವಕಾಶ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

**ಓದಿ. ಕೇ ಸ ಇ ಎ ಒ**

ಪ್ರಧಾನ ಪ್ರದನ್ಯಾದಂಡಾಧಿಕಾರಿಗಳು,
**ಹೊಸನಗರ**